ತಾಂತ್ರಿಕ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

---

**ದಿನಾಂಕ 05–08–2013 ಸೋಮವಾರದಂದು ಮಧ್ಯಾಹ್ನ 12.00 ಗಂಟೆಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳು**

**ಸಭೆಯಲ್ಲಿ ಹಾಜರಿದ್ದವರು:**

| | |
|---|---|
| 1. ಡಾ. ಹಿ.ಚಿ. ಬೋರಲಿಂಗಯ್ಯ<br>ಕುಲಪತಿಯವರು | : ಅಧ್ಯಕ್ಷರು |
| 2. ಡಾ. ಟಿ.ಪಿ. ವಿಜಯ್<br>ಕುಲಸಚಿವರು | : ಸದಸ್ಯರು |
| 3. ಶ್ರೀ ಬಿ. ರಾಮದಾಸ್<br>ಕಾರ್ಯಕಾರಿ ಸಮಿತಿ ಸದಸ್ಯರು, ಕವಿಹಂ | : ಸದಸ್ಯರು |
| 4. ಶ್ರೀ ಅಬ್ದುಲ್ ಹಕೀಂ<br>ಕಾರ್ಯಕಾರಿ ಸಮಿತಿ ಸದಸ್ಯರು, ಕವಿಹಂ | : ಸದಸ್ಯರು |
| 5. ಡಾ. ಡಿ. ಪಾಂಡುರಂಗಬಾಬು<br>ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| 6. ಡಾ. ಕೆ.ಎಂ. ಮೇತ್ರಿ<br>ಡೀನ್, ಸಮಾಜ ವಿಜ್ಞಾನ ನಿಕಾಯ, ಕವಿಹಂ | : ಸದಸ್ಯರು |
| 7. ಶ್ರೀ ರವಿಕುಮಾರ್<br>ಕಾರ್ಯನಿರ್ವಾಹಕ ಅಭಿಯಂತರರು<br>ಲೋ.ಇಲಾಖೆ, ಬಳ್ಳಾರಿ | : ಸದಸ್ಯರು |
| 8. ಪ್ರೊ. ಟಿ.ಹೆಚ್. ಪಟೇಲ<br>ತಾಂತ್ರಿಕ ತಜ್ಞರು (ಸಿವಿಲ್)<br>ವಿಜಯನಗರ ಇಂಜಿನಿಯರಿಂಗ್ ಕಾಲೇಜ್, ಬಳ್ಳಾರಿ | : ಸದಸ್ಯರು |
| 9. ಹಣಕಾಸು ಅಧಿಕಾರಿಗಳು<br>ಕವಿಹಂ, ವಿದ್ಯಾರಣ್ಯ | : ಸದಸ್ಯರು |
| 10. ಶ್ರೀ ಮಂಜುನಾಥ<br>ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು<br>ಲೋ.ಇ. ಉಪವಿಭಾಗ, ಹೊಸಪೇಟೆ | : ಸದಸ್ಯರು |

**1. ಸಭೆಯಲ್ಲಿ ಗೈರು ಹಾಜರಿದ್ದವರು**

| | |
|---|---|
| ಡಾ. ಕರೀಗೌಡ ಬೀಚನಹಳ್ಳಿ<br>ಡೀನ್, ಲಲಿತಕಲಾ ನಿಕಾಯ, ಕವಿಹಂ, ವಿದ್ಯಾರಣ್ಯ | : ಸದಸ್ಯರು |



PDF created with pdfFactory trial version www.pdffactory.com

**<u>ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ ಸದಸ್ಯರನ್ನು ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು</u>**

**<u>ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.</u>**

1. **ಕನ್‌ವೆನ್‌ಷನ್ ಸೆಂಟರ್ ಕಟ್ಟಡದ ಮೊದಲನೇ ಹಾಗೂ ಭಾಗಶಃ ಬಿಲ್ ಪಾವತಿ ಮಾಡುವ ಕುರಿತು.**

**ಟಿಪ್ಪಣಿ:** ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿ ಯುಜಿಸಿ 11ನೇ ಯೋಜನೆಯಡಿಯಲ್ಲಿ ಕನ್‌ವೆನ್‌ಷನ್ ಸೆಂಟರ್ ಕಟ್ಟಡವನ್ನು ಇ-ಪ್ರೆಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು ಅಂದಾಜು ವೆಚ್ಚಕ್ಕಿಂತ ಕಡಿಮೆ ದರವನ್ನು ನಮೂದಿಸಿದ ಶ್ರೀ ಜಿ. ಮುರಳೀಧರ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಹೊಸಪೇಟೆ ಇವರಿಗೆ ಕೆಲಸದ ಆದೇಶವನ್ನು ನೀಡಿ ಕರಾರು ಪತ್ರವನ್ನು ಮಾಡಿಕೊಳ್ಳಲಾಗಿದೆ. ಸದರಿ ಕಟ್ಟಡದ ಕಾಮಗಾರಿ ನಿರ್ವಹಿಸಿದ ಮೊದಲನೇ ಭಾಗಶಃ ಬಿಲ್ಲನ್ನು ಮಾಡಲಾಗಿದೆ. ಬಿಲ್ಲಿನ ಮೊತ್ತ ರೂ. 29,07,680=00ಗಳನ್ನು ಪಾವತಿ ಮಾಡಲು ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ:** ಕಟ್ಟಡದ ಕಾಮಗಾರಿಯನ್ನು ಖುದ್ದಾಗಿ ಪರಿಶೀಲಿಸಿದ ಸಮಿತಿಯ ಸದಸ್ಯರು ಕಟ್ಟಡದ ಪ್ರಗತಿಯನ್ನು ಪರಿಶೀಲಿಸಿದರು.ಈಹಿನ್ನೆಲೆಯಲ್ಲಿ ಕಾಮಗಾರಿಯ ಮೊದಲನೇ ಭಾಗಶಃ ಬಿಲ್ಲಿನ ಮೊತ್ತ ರೂ.29,07,680–00 ಗಳನ್ನು ಗುತ್ತಿಗೆದಾರರಿಗೆ ಪಾವತಿ ಮಾಡಲು ಸಮಿತಿಯು ಶಿಫಾರಸ್ಸು ಮಾಡಿತು ಹಾಗೂ ಗುತ್ತಿಗೆದಾರರಿಗೆ ಕೆಲಸವನ್ನು ನಿಗದಿತ ಅವಧಿಯಲ್ಲಿ ಮುಗಿಸಲು ಸ್ಥಳದಲ್ಲಿ ಹಾಜರಿದ್ದ ಗುತ್ತಿಗೆದಾರರಾದ ಶ್ರೀ ಜಿ. ಮುರಳೀಧರ ರೆಡ್ಡಿ, ಹೊಸಪೇಟೆ ಇವರಿಗೆ ಸಮಿತಿಯು ಸೂಚನೆ ನೀಡಿತು.

**2. ಅಕ್ಷರ ಗ್ರಂಥಾಲಯ ಕಟ್ಟಡದ ಮೊದಲ ಮಹಡಿಗೆ, ಯಲಹಂಕ ಟೈಲ್ಸ್, ಹಾಕಿರುವ ಬಿಲ್ ಪಾವತಿ ಮಾಡುವ ಬಗ್ಗೆ.**

**ಟಿಪ್ಪಣಿ:** ಅಕ್ಷರ ಗ್ರಂಥಾಲಯ ಕಟ್ಟಡದ ಮೊದಲ ಮಹಡಿಗೆ, ಯಲಹಂಕ ಟೈಲ್ಸ್, ಹಾಕಲು ಇ–ಪ್ರೆಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿತ್ತು. ಶ್ರೀ ಟಿ.ಎನ್. ಶ್ರೀನಿವಾಸ, 1ನೇ ದರ್ಜೆ ಗುತ್ತಿಗೆದಾರರು, ಕಮಲಾಪುರ ಇವರು ರೂ. 7,63,467–00 ಟೆಂಡರ್ ಮೊತ್ತ ಸಲ್ಲಿಸಿದ್ದರು. ದಿ: 5–3–2013ರಂದು ನಡೆದ ಕಟ್ಟಡ ಸಲಹಾ ಸಮಿತಿ ಸಭೆಯಲ್ಲಿ ದರಸಂಧಾನ ಮಾಡಿ ಮೊತ್ತ ರೂ. 7,50,000–00ಗಳಿಗೆ ಕೆಲಸ ನಿರ್ವಹಿಸಲು ಸಮಿತಿ ಅನುಮೋದನೆ ನೀಡಲಾಗಿತ್ತು. ಇದರ ಪ್ರಕಾರ ಸದರಿ ಗುತ್ತಿಗೆದಾರರಿಗೆ ಕೆಲಸದ ಆದೇಶ ಹಾಗೂ ಕರಾರು ಪತ್ರ ಮಾಡಿಕೊಂಡು ಕೆಲಸವನ್ನು ಮಾಡಿಸಲಾಗಿದೆ. ಮೊದಲನೇ ಹಾಗೂ ಅಂತಿಮ ಬಿಲ್ಲಿನ ಮೊತ್ತ ರೂ.7,48,117–00ಗಳನ್ನು ಪಾವತಿ ಮಾಡಲು ಸಮಿತಿಯ ಅನುಮೋದನೆ ಕೋರಲಾಗಿದೆ.

**ನಿರ್ಣಯ:** ಅಕ್ಷರ ಗ್ರಂಥಾಲಯ ಕಟ್ಟಡದ ಮೊದಲ ಮಹಡಿಗೆ, ಯಲಹಂಕ ಟೈಲ್ಸ್, ಹಾಕಿದ ಬಿಲ್ಲಿನ ಮೊತ್ತ ರೂ. 7,48,117–00ಗಳನ್ನು ಗುತ್ತಿಗೆದಾರರಿಗೆ ಪಾವತಿ ಮಾಡಲು ಸಮಿತಿಯ ಶಿಫಾರಸ್ಸು ಮಾಡಿತು ಹಾಗೂ ಕಟ್ಟಡದ ಉತ್ತರ ದಿಕ್ಕಿನ ಗೋಪುರದ ಕಡೆ ಇರುವ ಉಳಿದ ಭಾಗಕ್ಕೆ ಯಲಹಂಕ ಟೈಲ್ಸ್, ಅಳವಡಿಸಲು ಅಂದಾಜುವೆಚ್ಚ ಸಿದ್ಧಪಡಿಸಿ ಮುಂದಿನ ಸಭೆಯಲ್ಲಿ ಮಂಡಿಸಲು ಸಮಿತಿಯು ಸೂಚಿಸಿತು.

**3. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಕ್ರೀಡಾ ಸಮುಚ್ಚಯ ಕಟ್ಟಡದ ಬಿಲ್ ಪಾವತಿ ಮಾಡುವ ಕುರಿತು.**

**ಟಿಪ್ಪಣಿ:** ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಕ್ರೀಡಾ ಸಮುಚ್ಚಯ ಕಟ್ಟಡವನ್ನು ವಿಶೇಷ ಘಟಕ ಯೋಜನೆ ಅಡಿಯಲ್ಲಿ ನಿರ್ಮಿಸಲು ಇ–ಪ್ರೆಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು ಕಡಿಮೆ ದರವನ್ನು ನಮೂದಿಸಿರುವ ಶ್ರೀ ಪಿ. ಲಕ್ಷ್ಮೀರಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಹೊಸಪೇಟೆ ದಿ:5–3–2013ರಂದು ಕಟ್ಟಡ ಸಲಹಾ ಸಮಿತಿ ಸಭೆಯಲ್ಲಿ ದರಸಂಧಾನ ಮಾಡಿ ರೂ. 62,00,999–00ಗಳಿಗೆ ಕಾಮಗಾರಿಯನ್ನು ಮಾಡಲು ಸಮಿತಿಯು ಅನುಮೋದನೆ ನೀಡಿತು. ಇದರ ಪ್ರಕಾರ ಗುತ್ತಿಗೆದಾರರಿಗೆ ಕೆಲಸದ ಆದೇಶ ನೀಡಿ ಕರಾರುಪತ್ರ ಮಾಡಿಕೊಂಡು ಕಾಮಗಾರಿಯನ್ನು ಮಾಡಲಾಗುತ್ತಿದೆ. ಸದರಿ ಕಟ್ಟಡದ ಮೊಲದನೇ ಹಾಗೂ ಭಾಗಶಃ ಬಿಲ್ಲನ್ನು ಸಿದ್ಧಪಡಿಸಲಾಗಿದೆ. ಬಿಲ್ಲಿನ ಮೊತ್ತ ರೂ.19,43,409–00ಗಳನ್ನು ಪಾವತಿ ಮಾಡಲು ಸಮಿತಿಯ ಅನುಮೋದನೆ ಕೋರಲಾಗಿದೆ.



PDF created with pdfFactory trial version www.pdffactory.com

**ನಿರ್ಣಯ:** ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಕ್ರೀಡಾ ಸಮುಚ್ಛಯ ಕಟ್ಟಡ ಕಾಮಗಾರಿಯ ಪ್ರಗತಿಯನ್ನು ಕಟ್ಟಡ ಕಾಮಗಾರಿ ನಡೆಯುವ ಸ್ಥಳಕ್ಕೆ ಸಮಿತಿ ಸದ್ಯಸ್ಯರು ಭೇಟಿ ನೀಡಿ ಕಟ್ಟಡದ ಪ್ರಗತಿಯನ್ನು ಪರಿಶೀಲಿಸಿತು. ಈ ಹಿನ್ನೆಲೆಯಲ್ಲಿ ಈಗ ಸಲ್ಲಿಸಿರುವ ಮೊದಲನೇ ಭಾಗಶಃ ಬಿಲ್ಲಿನ ಮೊತ್ತ ರೂ.19,43,409–00ಗಳನ್ನು ಪಾವತಿ ಮಾಡಲು ಸಮಿತಿಯು ಶಿಫಾರಸ್ಸು ಮಾಡಿತು. ಹಾಗೂ ಕಟ್ಟಡ ಕಾಮಗಾರಿಯನ್ನು ಟೆಂಡರ್ ಅವಧಿಯಲ್ಲಿ ಮುಗಿಸಿಕೊಡಲು ಗುತ್ತಿಗೆದಾರರಾದ ಶ್ರೀ ಪಿ.ಲಕ್ಷ್ಮೀರಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಹೊಸಪೇಟೆ ಇವರಿಗೆ ಸಮಿತಿಯ ಸೂಚಿಸಿತು.

**4. ಗಿರಿಜನ ವಿದ್ಯಾರ್ಥಿನಿಯರ ವಸತಿನಿಲಯದ ಪರಿಷ್ಕೃತ ನೀಲಿನಕ್ಷೆ ಅನುಮೋದನೆ ನೀಡುವ ಕುರಿತು.**

**ಟಿಪ್ಪಣಿ:** ವಿಶೇಷ ಘಟಕದ ಗಿರಿಜನ ಉಪಯೋಜನೆ ಅಡಿಯಲ್ಲಿ ವಿದ್ಯಾರ್ಥಿನಿಯರ ವಸತಿನಿಲಯ ನಿರ್ಮಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು ಕಡಿಮೆ ದರವನ್ನು ನಮೂದಿಸಿರುವ ಶ್ರೀ ಪಿ. ಲಕ್ಷ್ಮೀರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಹೊಸಪೇಟೆ ಇವರೊಂದಿಗೆ ದಿ:5–3–2013ರಂದು ಕಟ್ಟಡ ಸಲಹಾ ಸಮಿತಿ ದರಸಂಧಾನ ಮಾಡಿ ರೂ. 74,00,999–00ಗಳಿಗೆ ಕೆಲಸ ನಿರ್ವಹಿಸಲು ಅನುಮೋದನೆ ನೀಡಿತು. ಈ ಹಿನ್ನೆಲೆಯಲಿ ಗುತ್ತಿಗೆದಾರರಿಗೆ ಕೆಲಸದ ಆದೇಶ ಹಾಗೂ ಕರಾರುಪತ್ರ ಮಾಡಿಕೊಳ್ಳಲಾಗಿದೆ. ಕಟ್ಟಡದ ಮೂಲನಕ್ಷೆಯಲ್ಲಿ ಬದಲಾವಣೆ ಮಾಡಿ ಕಟ್ಟಡವನ್ನು ವಿಸ್ತರಣೆ ಮಾಡುವ ರೀತಿಯಲ್ಲಿ ಕಟ್ಟಡದ ಪ್ಲಿಂಥ್ ವಿಸ್ತೀರ್ಣವನ್ನು ಹೆಚ್ಚುವರಿ ಮಾಡುವುದು ಮತ್ತು ಹೆಚ್ಚುವರಿ ಕಾಮಗಾರಿಯನ್ನು ಬೇಸ್‌ಮೆಂಟ್‌ವರೆಗೆ ಮಾತ್ರ ಮಾಡಿ, ಉಳಿದ ಮೇಲ್ಭಾಗದ ಕಾಮಗಾರಿಯನ್ನು ಎರಡನೇ ಹಂತದಲ್ಲಿ ಪೂರ್ಣಗೊಳಿಸಲು ಸಮಿತಿಯು ಅನುಮೋದನೆ ಕೋರಲಾಗಿದೆ.

**ನಿರ್ಣಯ:** ಗಿರಿಜನ ಉಪಯೋಜನೆಯ ಅಡಿಯಲ್ಲಿ ವಿದ್ಯಾರ್ಥಿನಿಯರ ವಸತಿನಿಲಯ ನಿರ್ಮಿಸಲು ಪರಿಷ್ಕೃತ ನೀಲಿನಕ್ಷೆಗೆ ಸಮಿತಿಯು ಅನುಮೋದನೆ ನೀಡಿತು ಹಾಗೂ ಕಟ್ಟಡದ ಹಿಂಭಾಗದ ಭಾಗವನ್ನು ಬೇಸ್‌ಮೆಂಟ್‌ವರೆಗೆ ಮಾಡುವುದು ಮೇಲ್ಭಾಗದ ಕೆಲಸವನ್ನು ಎರಡನೇ ಹಂತದಲ್ಲಿ ನಿರ್ಮಿಸಲು ಸಮಿತಿಯು ಸೂಚಿಸಿತು.

**5. ದೃಶ್ಯಕಲಾ ಕಟ್ಟಡ ಮತ್ತು ವಿದ್ಯುತ್‌ಪರಿವರ್ತಕಗಳಿಗೆ ಸಂಬಂಧಿಸಿದ ಬಿಲ್ಲನ್ನು ಪಾವತಿಸುವ ಕುರಿತು.**

**ಟಿಪ್ಪಣಿ:** ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿ ದೃಶ್ಯಕಲಾ ಕಟ್ಟಡ ಮತ್ತು ವಿದ್ಯುತ್‌ಪರಿವರ್ತಕಗಳಿಗೆ ಸಂಬಂಧಿಸಿದ ಸಾಮಾಗ್ರಿಗಳನ್ನು ಅಳವಡಿಸಲು ಟೆಂಡರ್ ಕರೆದು ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ. ಈ ಎರಡು ಕಾಮಗಾರಿಗಳ ಬಾಕಿ ಬಿಲ್ಲಿನ ಮೊತ್ತ ರೂ. 6,81,059–00 ಗಳನ್ನು ಪಾವತಿಸಲು ಸಮಿತಿಯು ಅನುಮೋದನೆ ಕೋರಲಾಗಿದೆ.

**ನಿರ್ಣಯ:** ದೃಶ್ಯಕಲಾ ಕಟ್ಟಡದ ವಿದ್ಯುತ್ ಕೆಲಸ ಹಾಗೂ ವಿದ್ಯುತ್‌ಪರಿವರ್ತಕಗಳನ್ನು ಅಳವಡಿಸುವ ಕೆಲಸವು ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಎರಡು ಕಾಮಗಾರಿಗಳ ಬಿಲ್ಲಿನ ಮೊತ್ತ ರೂ. 6,81,059–00ಗಳನ್ನು ಅಭಿವೃದ್ಧಿ ಅನುದಾನದಲ್ಲಿ ಪಾವತಿಸಲು ಸಮಿತಿಯು ಶಿಫಾರಸ್ಸು ಮಾಡಿತು.

**6. ಮಹಿಳಾ ವಸತಿ ನಿಲಯ ಕಟ್ಟಡದ ವಿದ್ಯುತ್ತೀಕರಣ ಕೆಲಸಕ್ಕೆ ಸಂಬಂಧಿಸಿದಂತೆ ಮೊದಲನೆಯ ಭಾಗಶಃ ಬಿಲ್ಲನ್ನು ಪಾವತಿಸುವ ಕುರಿತು.**

**ಟಿಪ್ಪಣಿ:** ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಮಹಿಳಾ ವಸತಿ ನಿಲಯ ಕಟ್ಟಡದ ಆಂತರಿಕ ವಿದ್ಯುತ್ತೀಕರಣ ಹಾಗೂ ಫಿಕ್ಚರ್ಸ್ ಅಳವಡಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ಕರೆದು ಕೆಲಸದ ಆದೇಶ ನೀಡಲಾಗಿದೆ. ಆಂತರಿಕ ವಿದ್ಯುತ್ತೀಕರಣಕ್ಕೆ ಸಂಬಂಧಿಸದಿಂತೆ ಮೊದಲನೇ ಭಾಗಶಃ ಬಿಲ್ಲನ್ನು ಮಾಡಲಾಗಿದೆ. ಬಿಲ್ಲಿನ ಮೊತ್ತ ರೂ. 2,64,928–00ಗಳನ್ನು ಪಾವತಿಸಲು ಸಮಿತಿಯು ಅನುಮೋದನೆ ಕೋರಲಾಗಿದೆ.



PDF created with pdfFactory trial version www.pdffactory.com

**ನಿರ್ಣಯ:** ಮಹಿಳಾ ವಸತಿನಿಲಯದ  ಆಂತರಿಕ ವಿದ್ಯುತ್ ಕಾಮಗಾರಿಗೆ ಸಂಬಂಧಿಸಿದಂತೆ ಕಟ್ಟಡಕ್ಕೆ ಭೇಟಿ ನೀಡಿದ ಸದಸ್ಯರು ಪರಿಶೀಲಿಸಿ, ಮೊದಲನೇ ಭಾಗಶಃ ಬಿಲ್ಲಿನ ಮೊತ್ತ ರೂ.2,64,928–00ಗಳನ್ನು ಪಾವತಿ ಮಾಡಲು ಸಮಿತಿಯು ಶಿಫಾರಸ್ಸು ಮಾಡಿತು.

**7. ಮಹಿಳೆಯರ ಮೂಲಭೂತ ಸೌಲಭ್ಯದ ಗುತ್ತಿಗೆದಾರರ ಮನವಿ ಪತ್ರದ ಕುರಿತು.**

**ಟಿಪ್ಪಣಿ:** ಅಕ್ಷರ ಗ್ರಂಥಾಲಯ ಕಟ್ಟಡದಲ್ಲಿ ಯುಜಿಸಿಯು 11ನೇ ಯೋಜನೆ ಅನುದಾನದಲ್ಲಿ ಇ–ಪ್ರೊಕ್ಯೂರಮೆಂಟ್ ಮುಖಾಂತರ ರೂ. 45,06,177–00ಗಳಿಗೆ ಟೆಂಡರ್ ಕರೆಯಲಾಗಿತ್ತು. ಶೇ15% ಕಡಿಮೆ ದರದಲ್ಲಿ ಟೆಂಡರ್ ನಮೂದಿಸಿದ ಸಂಸ್ಥೆಗೆ ರೂ. 38,30,250–00ಗಳಿಗೆ ಟೆಂಡರ್ ಮೊತ್ತಕ್ಕೆ ಅಮರ್ ಅಸೋಸಿಯೇಟ್ಸ್, ಹೊಸಪೇಟೆ ಇವರಿಗೆ ಕೆಲಸದ ಅದೇಶ ನೀಡಿ, ಕರಾರು ಪತ್ರ ಮಾಡಿಕೊಳ್ಳಲಾಗಿತ್ತು. ಇದುವರೆಗೆ ಆಗಿರುವ ಬಿಲ್ ಪಾವತಿ ಮೊತ್ತ ಈ ಕೆಳಕಂಡಂತಿದೆ.

| | | | | |
|---|---|---|---|---|
| ಎ) | ದಿನಾಂಕ 14.02.2012, ಚೆಕ್ ಸಂ. | 018107 | ರೂ. | 5,98,230.00 |
| ಬಿ) | ದಿನಾಂಕ 21.02.2012, ಚೆಕ್ ಸಂ. | 018110 | ರೂ. | 9,00,000.00 |
| | ಮತ್ತು | | | |
| | ದಿನಾಂಕ 31.03.2012, ಚೆಕ್ ಸಂ. | 018114 | ರೂ. | 19,00,000=00 |
| | **ಒಟ್ಟು ಪಾವತಿಸಿದ ಮೊತ್ತ** | | **ರೂ.** | **33,98,230=00** |

**ನಿರ್ಣಯ:** ಮಹಿಳೆಯರ ಮೂಲಭೂತ ಸೌಲಭ್ಯ ಕೆಲಸ ನಿರ್ವಹಿಸಿದ ಸಂಸ್ಥೆಯ ಮನವಿ ಪತ್ರವನ್ನು ಸಭೆಯು ಪರಿಶೀಲಿಸಿತು ಸಂಬಂಧಿಸಿದ ವಿವರಗಳನ್ನು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಮುಂದಿನ ತೀರ್ಮಾನ ತೆಗೆದುಕೊಳ್ಳಬಹುದಾಗಿದೆ ಎಂದು ಸಮಿತಿಯು ಅಭಿಪ್ರಾಯ ಪಟ್ಟಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು**

**1. ವಿಷಯ: ಬೋಧಕರ ವಸತಿಗೃಹಗಳ ದುರಸ್ಥಿ ಕುರಿತು.**

**ನಿರ್ಣಯ:** ಬೋಧಕರ ವಸತಿಗೃಹಗಳನ್ನು ನಿರ್ಮಿಸಿ 14 ವರ್ಷಗಳಾಗಿದ್ದು, ನಿರ್ವಹಣೆಯ ಸಮಸ್ಯೆಯಿಂದಾಗಿ ಅನೇಕ ತೊಂದರೆಗಳು ಉಂಟಾಗಿವೆ. ಅವುಗಳ ನಿರ್ವಹಣೆ ಮತ್ತು ಅವಶ್ಯವಿರುವ ಕೆಲಸವನ್ನು ಮಾಡಿಸಲು ಮಾನ್ಯ ಕುಲಸಚಿವರ ಸೂಚನೆ ಮೇರೆಗೆ ಎಲ್ಲಾ ಮನೆಗಳ ಸ್ಥಳ ಪರಿಶೀಲನೆ ಮಾಡಿದ ತಾಂತ್ರಿಕ ವಿಭಾಗದವರು ಕಟ್ಟಡಗಳಲ್ಲಿ ಅವಶ್ಯಕವಾಗಿರುವ ಕೆಲಸವನ್ನು ಮಾಡಿಸಲು ಅಂದಾಜುವೆಚ್ಚದ ಪ್ರಸ್ತಾವ ಸಿದ್ಧಪಡಿಸಿ ಸಮಿತಿಯ ಮುಂದೆ ಮಂಡಿಸಲಾಗಿದೆ. ಸ್ಲ್ಯಾಬಿನಲ್ಲಿ ನೀರು ನಿಂತು ಕಟ್ಟಡದ ಒಳಭಾಗದ ಕೋಣೆಗಳಲ್ಲಿ ಸುಣ್ಣದ ಪೌಡರ್ ಉದುರುತ್ತಿದೆ. ಇದನ್ನು ಸರಿಪಡಿಸಲು ಯಲಹಂಕಟೈಲ್ಸ್ ಅಥವಾ ಪೋಸರಾಕ್ ಕೆಮಿಕಲ್ ಟ್ರೀಟ್‌ಮೆಂಟ್ ಮಾಡಿಸುವುದು. ಬಟ್ಟೆಗಳನ್ನಿಡಲು ವಾರ್ಡರೊಬ್, ಪುಸ್ತಕಗಳನ್ನಿಡಲು ರ್ಯಾಕ್‌ಗಳು, ಉತ್ತರದ ದಿಕ್ಕಿನ ಕಡೆಯಿರುವ ಬಾಗಿಲಿಗೆ ಕಬ್ಬಿಣದ ಭದ್ರತಾ ಬಾಗಿಲು ಅಳವಡಿಸುವುದು. ಕಟ್ಟಡಗಳ ಹಿಂಭಾಗದಲ್ಲಿ ಮರದ ಬೇರುಗಳು ಸ್ಟೋನ್‌ವೇರ್ ಪೈಪ್‌ಲೈನ್ ಒಳಗೆ ಹೋಗಿ ಪೈಪ್‌ಗಳು ಒಡೆದಿರುತ್ತವೆ ಮತ್ತು ಚೇಂಬರ್‌ಗಳು ಸಹ ಹಾಳಾಗಿರುತ್ತವೆ. ಹೊಸದಾಗಿ ಪೈಪ್‌ಲೈನ್ ಮಾಡಿ ಚೇಂಬರ್ ಕಟ್ಟುವುದು ಕಟ್ಟಡದ ಒಳಭಾಗದಲ್ಲಿ ವಿದ್ಯುತ್‌ಗೆ ಸಂಬಂಧಪಟ್ಟ ಸಣ್ಣ ಪುಟ್ಟ ರಿಪೇರಿ ಹಾಗೂ ಬದಲಾವಣೆ ಮಾಡುವ ಕೆಲಸವೂ



PDF created with pdfFactory trial version www.pdffactory.com

ಸೇರಿದೆ. ಈ ಒಟ್ಟು ಕೆಲಸದ ರೂ.50,69,746–00 ಅಂದಾಜುವೆಚ್ಚಗಳ ಪ್ರಸ್ತಾವ ಸಿದ್ಧಪಡಿಸಿ ಸಮಿತಿ ಮುಂದೆ ಮಂಡಿಸಲಾಯಿತು. ಸಮಿತಿಯು ಒಪ್ಪಿಗೆ ಸೂಚಿಸಿ ಮುಂದಿನ ಕ್ರಮಕೈಗೊಳ್ಳಲು ಅಭಿಪ್ರಾಯಪಟ್ಟಿತು. ಆದರೆ ಹಣದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ನಿಯಮಾನುಸಾರ ಕೆಲಸ ನಿರ್ವಹಿಸಲು ಸಮಿತಿಯು ಅಭಿಪ್ರಾಯ ಪಟ್ಟಿತು. ಮೊದಲ ಆದ್ಯತೆಯಲ್ಲಿ ಆರ್‌ಸಿಸಿ ಸ್ಲ್ಯಾಬ್ ಸೋರುವುದನ್ನು ಗಮನಿಸಿ ಯಲಹಂಕಟೈಲ್ಸ್ ಅಥವಾ ಪೋಸರಾಕ್ ಕೆಮಿಕಲ್ ಟ್ರೀಟ್‌ಮೆಂಟ್ ಮಾಡಲು ಸಭೆಯು ಸಮ್ಮತಿಸಿತು.

**2. ವಿಷಯ: ವಿಕಲಾಂಗ ಚೇತನರಿಗೆ ರ್‍ಯಾಂಪ್ ಮಾಡುವ ಕುರಿತು.**

**ನಿರ್ಣಯ:** ವಿಕಲಾಂಗ ಚೇತನರಿಗೆ ಕಟ್ಟಡಕ್ಕೆ ಹತ್ತಿ ಬರಲು ಅನುಕೂಲವಾಗುವಂತೆ ಈಗ ಹೊಸದಾಗಿ ನಿರ್ಮಿಸುತ್ತಿರುವ ಕಟ್ಟಡಗಳಲ್ಲಿ ಕಡ್ಡಾಯವಾಗಿ ರ್‍ಯಾಂಪ್ ಮಾಡುವುದು ಹಾಗೂ ಈಗಾಗಲೇ ಹಾಲಿ ಇರುವ ಮುಖ್ಯ ಕಟ್ಟಡಗಳಿಗೆ ನಿಯಮಾನುಸಾರ ರ್‍ಯಾಂಪ್ ಮಾಡಲು ಸಮಿತಿಯು ಅನುಮೋದನೆ ನೀಡಿತು.

**3. ವಿಷಯ:– ಆಡಳಿತ ಸಿಬ್ಬಂದಿ ಎಲ್ಲಾ ವಸತಿಗೃಹಗಳಿಗೆ ಕಬ್ಬಿಣದ ಭದ್ರತಾ ಬಾಗಿಲು ಹಾಗೂ ಪೇಂಟಿಂಗ್ ಮಾಡುವುದು.**

**ನಿರ್ಣಯ:** ಆಡಳಿತ ಸಿಬ್ಬಂದಿಗಳ ಎಲ್ಲಾ ವಸತಿಗೃಹಗಳಿಗೆ ಕಬ್ಬಿಣದ ಭದ್ರತಾ ಬಾಗಿಲನ್ನು ಅಳವಡಿಸುವ ಕೆಲಸ ಹಾಗೂ ಮೊದಲು ನಿರ್ಮಿಸಿದ ಮನೆಗಳಿಗೆ ಹತ್ತು ವರ್ಷಗಳಾಗಿದ್ದು, ಅವುಗಳಿಗೆ ಪೇಂಟಿಂಗ್ ಮಾಡಲು ಈಗಾಗಲೇ ಕಾರ್ಯಕಾರಿ ಸಮಿತಿಯು ಒಪ್ಪಿಗೆ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ನಿಯಮಾನುಸಾರ ಕೆಲಸ ಮಾಡಿಸಲು ಸಮಿತಿಯು ಅನುಮೋದನೆ ನೀಡಿತು.

**4. ವಿಷಯ:– ಕಟ್ಟಡ ಕಾಮಗಾರಿಗಳ ಚೆಕ್‌ಮೆಜರ್‌ಮೆಂಟ್ ಮಾಡುವ ಕುರಿತು.**

**ನಿರ್ಣಯ:** ವಿಶ್ವವಿದ್ಯಾಲಯಕ್ಕೆ ವಿವಿಧ ಕಡೆಯಿಂದ ಬಂದಿರುವ ಅನುದಾನ ಬಳಸಿ ತಾಂತ್ರಿಕ ವಿಭಾಗದಿಂದ ಟೆಂಡರ್ ಕರೆದು ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಈಗ ಮೂರು ಕಟ್ಟಡಗಳ ನಿರ್ಮಾಣಕಾರ್ಯ ಪ್ರಗತಿಯಲ್ಲಿದ್ದು, ಇವುಗಳ ಮೇಲುಸ್ತುವಾರಿ ಮತ್ತು ಚೆಕ್‌ಮೆಸರ್‌ಮೆಂಟ್ ಮಾಡಲು ತಾಂತ್ರಿಕ ವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇಲ್ಲದೆ ಇರುವುದರಿಂದ ಮೇಲುಸ್ತುವಾರಿ ಹಾಗೂ ಚೆಕ್‌ಮೆಜರ್‌ಮೆಂಟ್‌ಗೆ ತೊಂದರೆಯಾಗುತ್ತದೆಂದು ಗಮನಿಸಿದ ಸಮಿತಿಯು ಹೊಸಪೇಟೆ ಲೋಕೋಪಯೋಗಿ ಇಲಾಖೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ತಾತ್ಕಾಲಿವಾಗಿ ನಿಯೋಜಿಸಲು ಅಧೀಕ್ಷಕ ಅಭಿಯಂತರರು, ಬಳ್ಳಾರಿ ವೃತ್ತ ಇವರಿಗೆ ಪತ್ರವನ್ನು ಸಿದ್ಧಪಡಿಸಿ ಕಳುಹಿಸಲು ಸಭೆಯು ಸೂಚಿಸಿತು.

**5. ವಿಷಯ:– ಕನ್‌ವೆನ್‌ಷೆನ್ ಸೆಂಟರ್ ಕಟ್ಟಡದ ನಾನ್ ಟೆಂಡರ್ ಐಟಂ ಬಗ್ಗೆ ಗುತ್ತಿಗೆದಾರರ ಮನವಿ ಪತ್ರದ ಕುರಿತು.**

**ನಿರ್ಣಯ:** ಕನ್‌ವೆನ್‌ಷೆನ್ ಸೆಂಟರ್ ಕಟ್ಟಡವನ್ನು ಎತ್ತರದ ಪ್ರದೇಶದಲ್ಲಿ ಮತ್ತು ಪ್ರಾಕೃತಿಕವಾದ ಪರಿಸರದಲ್ಲಿ ಸುಂದರವಾಗಿ ಕಾಣುವಂತೆ ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ಹಳ್ಳಿಕೆರೆ ಕೆರೆಯ ಹಿಂಭಾಗದ ಎತ್ತರದ ಪ್ರದೇಶದಲ್ಲಿ ಸ್ಥಳವನ್ನು ಮಾನ್ಯ ಕುಲಪತಿಯವರು ಹಾಗೂ ಇತರ ಸದಸ್ಯರು ಆಯ್ಕೆ ಮಾಡಿದರು. ಈ ಸ್ಥಳದಲ್ಲಿ ಗುಂಡುಕಲ್ಲುಗಳು, ಹಾಸುಬಂಡೆಗಳು, ತಗ್ಗು–ದಿಣ್ಣೆಗಳನ್ನು ಸಮಗೊಳಿಸುವುದು, ಗಿಡಗಂಟೆ ಪೊದೆಗಳು ತುಂಬಾ ಇದ್ದುದರಿಂದ ಈ ಕೆಳಕಂಡ ಕೆಲಸಗಳನ್ನು ಮಾಡಿಸುವುದು ಅನಿವಾರ್ಯವಾಗಿತ್ತು.



PDF created with pdfFactory trial version www.pdffactory.com

1. ಗಿಡಗಂಟೆಗಳು ಮತ್ತು ಪೊದೆಗಳನ್ನು ಸ್ವಚ್ಛಗೊಳಿಸುವುದು
2. ನೆಲವನ್ನು ಸಮಮಟ್ಟ ಮಾಡುವುದು
3. ಗುಂಡುಕಲ್ಲುಗಳನ್ನು ಸ್ಫೋಟಿಸಿ ಒಡೆದು ತೆಗೆಯುವುದು
4. ಹಾಸುಬಂಡೆಗಳನ್ನು ಸ್ಫೋಟಿಸಿ ತೆಗೆದು ಸಮಮಟ್ಟ ಮಾಡಿಕೊಳ್ಳುವುದು
5. ಕೆಲವು ಕಾಲಂ ಪಿಟ್ಟುಗಳಲ್ಲಿ ಮೃದು ಕಲ್ಲನ್ನು ಡ್ರಿಲ್ ಮಾಡಿ ತೆಗೆಯುವುದು ಮತ್ತು
6. ವಾಸ್ತುಶಿಲ್ಪಿಗಳ ನಿರ್ದೇಶನದಂತೆ ಹಾಸುಬಂಡೆ ಬಂದ ಸ್ಥಳದಲ್ಲಿ ಕಾಲಂ ಫೂಟಿಂಗ್‌ಗೆ ಡ್ರಿಲ್ ಮಾಡಿ ಆಂಕರ್ ರಾಡುಗಳನ್ನು ಹಾಕಿ ಕೆಮಿಕಲ್‌ನಿಂದ ಗ್ರೌಟಿಂಗ್ ಮಾಡುವುದು.

ಮೇಲ್ಕಂಡ ಈ ಆರು ಐಟಂಗಳು ಮೂಲ ಟೆಂಡರ್‌ನಲ್ಲಿ ಇರುವುದಿಲ್ಲ. ಆದ್ದರಿಂದ ಕಟ್ಟಡ ನಿರ್ಮಾಣ ಮಾಡುವಾಗ ನಾನ್ ಟೆಂಡರ್ ಐಟಂಗಳ ಕೆಲಸಗಳನ್ನು ಮಾಡಲಾಗಿದೆ. ಈ ಹೆಚ್ಚುವರಿ ಐಟಂಗಳಿಗೆ ಬಿಲ್ ಪಾವತಿಗಾಗಿ ಶ್ರೀ ಜಿ. ಮುರಳೀಧರ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಹೊಸಪೇಟೆ ಇವರ ಮನವಿಯನ್ನು ಸಮಿತಿಯು ಪರಿಶೀಲಿಸಿತು ಮತ್ತು ಕಟ್ಟಡದಲ್ಲಿ ಕೆಲಸ ಮಾಡಿದರ ಬಗ್ಗೆ ಪರಿಶೀಲನೆ ಮಾಡಿ ಈ 2012–13ರ ಸಾಲಿನ ದರಪಟ್ಟಿಯ ದರದಲ್ಲಿ ಟೆಂಡರ್ ಪ್ರೀಮಿಯಂ ಕಳೆದು ಬಿಲ್ ಪಾವತಿಸಲು ಸಮಿತಿಯು ಅನುಮೋದನೆ ನೀಡಿತು.

**ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.**

**ಕುಲಸಚಿವರು** **ಅಧ್ಯಕ್ಷರು**



PDF created with pdfFactory trial version www.pdffactory.com

**ದಿನಾಂಕ: 05–08–2013ರ ಕಟ್ಟಡ ಸಲಹಾ ಸಮಿತಿ ಸಭೆಯ ಕಾರ್ಯಸೂಚಿ**

1. **ಕನ್‌ವೆನ್‌ಷೆನ್ ಸೆಂಟರ್ ಕಟ್ಟಡದ ಮೊದಲನೇ ಹಾಗೂ ಭಾಗಶಃ ಬಿಲ್ ಪಾವತಿ ಮಾಡುವ ಕುರಿತು.**

ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿ ಯುಜಿಸಿ 11ನೇ ಯೋಜನೆಯಡಿಯಲ್ಲಿ ಕನ್‌ವೆನ್‌ಷೆನ್ ಸೆಂಟರ್ ಕಟ್ಟಡವನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು ಅಂದಾಜು ವೆಚ್ಚಕ್ಕಿಂತ ಕಡಿಮೆ ದರವನ್ನು ನಮೂದಿಸಿದ ಶ್ರೀ ಜಿ. ಮುರಳೀಧರ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕೆಲಸ ಆದೇಶವನ್ನು ನೀಡಿ ಕರಾರು ಪತ್ರವನ್ನು ಮಾಡಿಕೊಳ್ಳಲಾಗಿದೆ. ಸದರಿ ಕಟ್ಟಡದ ಕಾಮಗಾರಿ ನಿರ್ವಹಿಸಿದ ಮೊದಲನೇ ಭಾಗಶಃ ಬಿಲ್ಲನ್ನು ಮಾಡಲಾಗಿದೆ. ಬಿಲ್ಲಿನ ಮೊತ್ತ ರೂ. 29,07,680–00ಗಳನ್ನು ಪಾವತಿ ಮಾಡಲು ಸಮಿತಿಯ ಅನುಮೋದನೆ ಕೋರಲಾಗಿದೆ.

**2.ಅಕ್ಷರ ಗ್ರಂಥಾಲಯ ಕಟ್ಟಡದ ಮೊದಲ ಮಹಡಿಗೆ ಯಲಹಂಕ ಟೈಲ್ಸ್ ಹಾಕಿರುವ ಬಿಲ್ ಪಾವತಿ ಮಾಡುವ ಬಗ್ಗೆ.**

**ಟಿಪ್ಪಣಿ:** ಅಕ್ಷರ ಗ್ರಂಥಾಲಯ ಕಟ್ಟಡದ ಮೊದಲ ಮಹಡಿಗೆ ಯಲಹಂಕ ಟೈಲ್ಸ್ ಹಾಕಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿತ್ತು. ಶ್ರೀ ಟಿ.ಎನ್.ಶ್ರೀನಿವಾಸ, 1ನೇ ದರ್ಜೆ ಗುತ್ತಿಗೆದಾರರು, ಕಮಲಾಪುರ ಇವರು ರೂ. 7,63,467=00 ಟೆಂಡರ್ ಮೊತ್ತ ಸಲ್ಲಿಸಿದ್ದರು. ದಿ: 05–03–2013ರಂದು ನಡೆದ ಕಟ್ಟಡ ಸಲಹಾ ಸಮಿತಿ ಸಭೆಯಲ್ಲಿ ದರ ಸಂಧಾನ ಮಾಡಿ ಮೊತ್ತ ರೂ. 7,50,000=00ಗಳಿಗೆ ಕೆಲಸ ನಿರ್ವಹಿಸಲು ಸಮಿತಿ ಅನುಮೋದನೆ ನೀಡಲಾಗಿತ್ತು. ಇದರ ಪ್ರಕಾರ ಸದರಿ ಗುತ್ತಿಗೆದಾರರಿಗೆ ಕೆಲಸದ ಆದೇಶ ಹಾಗೂ ಕರಾರು ಪತ್ರ ಮಾಡಿಕೊಂಡು ಕೆಲಸವನ್ನು ಮಾಡಿಸಲಾಗಿದೆ. ಮೊದಲನೆ ಹಾಗೂ ಅಂತಿಮ ಬಿಲ್ಲಿನ ಮೊತ್ತ ರೂ. 7,48,117=00 ಗಳನ್ನು ಪಾವತಿ ಮಾಡಲು ಸಮಿತಿಯ ಅನುಮೋದನೆ ಕೋರಲಾಗಿದೆ.

**3. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಕ್ರೀಡಾ ಸಮುಚ್ಛಯ ಕಟ್ಟಡದ ಬಿಲ್ ಪಾವತಿ ಮಾಡುವ ಕುರಿತು**

**ಟಿಪ್ಪಣಿ:** ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಕ್ರೀಡಾ ಸಮುಚ್ಛಯ ಕಟ್ಟಡವನ್ನು ವಿಶೇಷ ಘಟಕ ಯೋಜನೆಯಲ್ಲಿ ನಿರ್ಮಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು ಕಡಿಮೆ ದರವನ್ನು ನಮೂದಿಸಿರುವ ಶ್ರೀ ಲಕ್ಷ್ಮೀರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಹೊಸಪೇಟೆ ಇವರೊಂದಿಗೆ ದಿನಾಂಕ 5.3.2013ರಂದು ಕಟ್ಟಡ ಸಲಹಾ ಸಮಿತಿ ಸಭೆಯಲ್ಲಿ ದರ ಸಂಧಾನ ಮಾಡಿ ರೂ. 62,00,999=00 ಗಳಿಗೆ ಕಾಮಗಾರಿಯನ್ನು ಮಾಡಲು ಸಮಿತಿಯು ಅನುಮೋದನೆ ನೀಡಿತು. ಇದರ ಪ್ರಕಾರ ಗುತ್ತಿಗೆದಾರರಿಗೆ ಕೆಲಸದ ಆದೇಶ ನೀಡಿ ಕರಾರು ಪತ್ರ ಮಾಡಿಕೊಂಡು ಕಾಮಗಾರಿಯನ್ನು ಮಾಡಲಾಗುತ್ತಿದೆ. ಸದರಿ ಕಟ್ಟಡದ ಮೊದಲನೇ ಹಾಗೂ ಭಾಗಶ: ಬಿಲ್ಲನ್ನು ಸಿದ್ಧಪಡಿಸಲಾಗಿದೆ. ಬಿಲ್ಲಿನ ಮೊತ್ತ ರೂ. 19,43,409=00 ಗಳನ್ನು ಪಾವತಿ ಮಾಡಲು ಸಮಿತಿಯ ಅನುಮೋದನೆ ಕೋರಲಾಗಿದೆ.

**4. ಗಿರಿಜನ ವಿದ್ಯಾರ್ಥಿನಿಯರ ವಸತಿನಿಲಯದ ಪರಿಷ್ಕೃತ ನೀಲಿನಕ್ಷೆ ಅನುಮೋದನೆ ನೀಡುವ ಕುರಿತು.**

**ಟಿಪ್ಪಣಿ:** ವಿಶೇಷ ಘಟಕದ ಗಿರಿಜನ ಉಪಯೋಜನೆಯಲ್ಲಿ ವಿದ್ಯಾರ್ಥಿನಿಯರ ವಸತಿನಿಲಯ ನಿರ್ಮಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆದು ಕಡಿಮೆ ದರವನ್ನು ನಮೂದಿಸಿರುವ ಶ್ರೀ ಲಕ್ಷ್ಮೀರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಹೊಸಪೇಟೆ ಇವರೊಂದಿಗೆ ದಿನಾಂಕ 5.3.2013 ರಂದು ಕಟ್ಟಡ ಸಲಹಾ ಸಮಿತಿ ಸಭೆಯಲ್ಲಿ ದರ ಸಂಧಾನ ಮಾಡಿ ರೂ. 74,00,999=00 ಗಳಿಗೆ ಕೆಲಸ ನಿರ್ವಹಿಸಲು ಅನುಮೋದನೆ ನೀಡಿತು. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರಿಗೆ ಕೆಲಸದ ಆದೇಶ ಹಾಗೂ ಕರಾರು ಪತ್ರ ಮಾಡಿಕೊಳ್ಳಲಾಗಿದೆ. ಕಟ್ಟಡ ಮೂಲನಕ್ಷೆಯಲ್ಲಿ ಬದಲಾವಣೆ ಮಾಡಿ ಕಟ್ಟಡವನ್ನು ವಿಸ್ತರಣೆ ಮಾಡುವ ರೀತಿಯಲ್ಲಿ ಕಟ್ಟಡದ ಪ್ಲಿಂಥ್ ವಿಸ್ತೀರ್ಣವನ್ನು ಹೆಚ್ಚುವರಿ ಮಾಡುವುದು ಮತ್ತು ಹೆಚ್ಚುವರಿ ಕಾಮಗಾರಿಯನ್ನು ಬೇಸ್‌ಮೆಂಟ್‌ವರೆಗೆ ಮಾತ್ರ ಮಾಡಿ, ಉಳಿದ ಮೇಲ್ಭಾಗದ ಕಾಮಗಾರಿಯನ್ನು ಎರಡನೇ ಹಂತದಲ್ಲಿ ಪೂರ್ಣಗೊಳಿಸಲು ಸಮಿತಿಯ ಅನುಮೋದನೆ ಕೋರಲಾಗಿದೆ.



PDF created with pdfFactory trial version www.pdffactory.com

1. **ದೃಶ್ಯಕಲಾ ಕಟ್ಟಡ ಮತ್ತು ವಿದ್ಯುತ್ ಪರಿವರ್ತಕಗಳಿಗೆ ಸಂಬಂಧಿಸಿದ ಬಿಲ್ಲನ್ನು ಪಾವತಿಸುವ ಕುರಿತು.**

**ಟಿಪ್ಪಣಿ:** ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿ ದೃಶ್ಯಕಲಾ ಕಟ್ಟಡ ಮತ್ತು ವಿದ್ಯುತ್ ಪರಿವರ್ತಕಗಳಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಅಳವಡಿಸಲು ಟೆಂಡರ್ ಕರೆದು ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ. ಈ ಎರಡು ಕಾಮಗಾರಿಗಳ ಬಾಕಿ ಉಳಿದ ಬಿಲ್ಲಿನ ಮೊತ್ತ ರೂ. 6,81,059=00 ಗಳನ್ನು ಪಾವರಿಸಲು ಸಮಿತಿಯ ಅನುಮೋದನೆ ಕೋರಿದೆ.

2. **ಮಹಿಳಾ ವಸತಿ ನಿಲಯ ಕಟ್ಟಡದ ವಿದ್ಯುತ್ತೀಕರಣ ಕೆಲಸಕ್ಕೆ ಸಂಬಂಧಿಸಿದಂತೆ ಮೊದಲನೆಯ ಭಾಗಶ: ಬಿಲ್ಲನ್ನು ಪಾವತಿಸುವ ಕುರಿತು.**

**ಟಿಪ್ಪಣಿ:** ಕನ್ನಡ ವಿಶ್ವವಿದ್ಯಾಲಯ ಆವರಣದಲ್ಲಿ ಮಹಿಳಾ ವಸತಿನಿಲಯ ಕಟ್ಟಡದ ಆಂತರಿಕ ವಿದ್ಯುತ್ತೀಕರಣ ಹಾಗೂ ಫಿಕ್ಚರ್ಸ್ ಅಳವಡಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ಕರೆದು ಕೆಲಸದ ಆದೇಶ ನೀಡಲಾಗಿದೆ. ಆಂತರಿಕ ವಿದ್ಯುತ್ತೀಕರಣಕ್ಕೆ ಸಂಬಂಧಿಸಿದಂತೆ ಮೊದಲನೇ ಭಾಗಶ: ಬಿಲ್ಲನ್ನು ಮಾಡಲಾಗಿದೆ. ಬಿಲ್ಲಿನ ಮೊತ್ತ ರೂ. 2,64,928=00 ಗಳನ್ನು ಪಾವತಿಸಲು ಸಮಿತಿಯ ಅನುಮೋದನೆ ಕೋರಿದೆ.

7. **ಮಹಿಳೆಯ ಮೂಲಭೂತ ಸೌಲಭ್ಯದ ಗುತ್ತಿಗೆದಾರರ ಮನವಿ ಪತ್ರದ ಕುರಿತು.**

**ಟಿಪ್ಪಣಿ:** ಅಕ್ಷರ ಗ್ರಂಥಾಲಯ ಕಟ್ಟಡದಲ್ಲಿ ಯುಜಿಸಿಯ 11ನೇ ಯೋಜನೆ ಅನುದಾನದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ರೂ 45,06,177=00 ಗಳಿಗೆ ಟೆಂಡರ್ ಕರೆಯಲಾಗಿತ್ತು. ಶೇ 15 ಕಡಿಮೆ ದರದಲ್ಲಿ ಟೆಂಡರ್ ನಮೂದಿಸಿದ ಸಂಸ್ಥೆಗೆ ರೂ 38,30,250=00 ಟೆಂಡರ್ ಮೊತ್ತಕ್ಕೆ ಅಮರ್ ಅಸೋಸಿಯೇಟ್ಸ್, ಹೊಸಪೇಟೆ ಇವರಿಗೆ ಕೆಲಸದ ಆದೇಶ ನೀಡಿ, ಕರಾರು ಪತ್ರ ಮಾಡಿಕೊಳ್ಳಲಾಗಿತ್ತು. ಇದುವರೆಗೆ ಆಗಿರುವ ಬಿಲ್ ಪಾವತಿ ಮೊತ್ತ ಈ ಕೆಳಕಂಡಂತಿದೆ.

| | | | |
|---|---|---|---|
| ಎ) | ದಿನಾಂಕ 14.02.2012, ಚೆಕ್ ಸಂ. 018107 | ರೂ. 5,98,230=00 | |
| ಬಿ) | ದಿನಾಂಕ 21.02.2012, ಚೆಕ್ ಸಂ. 018110 | ರೂ. | |
| | ದಿನಾಂಕ 31.03.2012, ಚೆಕ್ ಸಂ. 018114 | ರೂ. | 28,00,000=00 |
| **ಒಟ್ಟು ಪಾವತಿಸಿದ ಮೊತ್ತ** | **ರೂ.** | | **33,98,230=00** |

ಕೆಲಸದ ಆದೇಶದ ಪ್ರಕಾರ ಒಂದು ಪಾರ್ಟಿಷನ್ ಕೆಲಸ ಉಳಿದಿದ್ದು, ಸದರಿ ಕೆಲಸವನ್ನು ಅಳವಡಿಸುವ ಸ್ಥಳವನ್ನು ಸೂಚಿಸಿದರೆ, ಆ ಸ್ಥಳದಲ್ಲಿ ಪಾರ್ಟಿಷನ್ ನ್ನು ಅಳವಡಿಸಿ ಟೆಂಡರ್ ಕೆಲಸದ ಪ್ರಕಾರ ಕೆಲಸವನ್ನು ಪೂರ್ಣಗೊಳಿಸಿದ ನಂತರ ಒಟ್ಟು ಬಿಲ್ಲಿನ ಬಾಕಿ ಮೊತ್ತ ರೂ. 4,32,020=00ನ್ನು ಪಾವತಿ ಮಾಡಲು ಕೆಲಸ ನಿರ್ವಹಿಸಿರುವ ಸಂಸ್ಥೆಯಾದ ಅಮರ್ ಅಸೋಸಿಯೇಟ್ಸ್, ಹೊಸಪೇಟೆ ಇವರು ಪತ್ರವನ್ನು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಅಕ್ಷರ ಗ್ರಂಥಾಲಯ ಕಟ್ಟಡದಲ್ಲಿ ಪಾರ್ಟಿಷನ್ ಅಣವಡಿಸಿಕೊಂಡು ಬಾಕಿ ಬಿಲ್ಲಿನ ಮೊತ್ತವನ್ನು ಪಾವತಿಸಲು ಸಲಹಾ ಸಮಿತಿಯ ಅನುಮತಿ ಕೋರಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು**



PDF created with pdfFactory trial version www.pdffactory.com

PDF created with pdfFactory trial version www.pdffactory.com